ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ದಿನಾಂಕ 02.12.2011ರ ಪತ್ರದಲ್ಲಿ ಸೂಚಿಸಲಾಗಿದೆ.

4. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಈ ರೀತಿ ಕೆಲಸಕ್ಕೆ ತೆಗೆದುಕೊಳ್ಳಲಾದ ನೌಕರರನ್ನು ತೆಗೆದು ಹಾಕಿದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ಕೈರಸೀದಿ ಮೂಲಕ ವಿದ್ಯಾರ್ಥಿನಿಲಯದಲ್ಲಿ ತೆಗೆದುಕೊಳ್ಳಲಾಗಿದ್ದ ಇಬ್ಬರನ್ನು ಡಿಸೆಂಬರ್ 2011ರ ಮಾಹೆಯಿಂದ ಸೇವೆಯಲ್ಲಿ ಮುಂದುವರೆಸದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

5. ಆಯುಕ್ತರು, ಮಶಜ ಕಲ್ಯಾಣ ಇಲಾಖೆ ಇವರು ಕೈರಸೀದಿ ಪಾವತಿಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಮುಂದುವರೆಸದೆ ಹೊರಸಂಪನ್ಮೂಲದ ಮೂಲಕ ಗ್ರೂಪ್-ಡಿ ವೃಂದ ಸಿಬ್ಬಂದಿಯ ಸೇವೆಯನ್ನು ತೆಗೆದುಕೊಂಡು ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸುವಂತೆ ದಿನಾಂಕ 02.12.2011ರ ಪತ್ರವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಚಿಕ್ಕಬಳ್ಳಾಪುರ ಇವರಿಗೆ ಬರೆದ ನಂತರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೆಲವು ನೌಕರರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿ ಸೇವೆಯಲ್ಲಿ ಮುಂದುವರೆಸುವಂತೆ ಕೋರಿದ್ದು, ಮಾನ್ಯ ನ್ಯಾಯ ಮಂಡಳಿಯು ದಿನಾಂಕ 21.12.2011 ರ ಮಧ್ಯಂತರ ಆದೇಶದಲ್ಲಿ ಎರಡು ತಿಂಗಳ ಅವಧಿಗೆ ಅರ್ಜಿದಾರರನ್ನು ತೆಗೆಯದಂತೆ ಆದೇಶಿಸಿರುತ್ತದೆ.

ಈ ಸಂಬಂಧವಾಗಿ ನ್ಯಾಯ ಮಂಡಳಿಯಲ್ಲಿ ಪ್ರಕರಣ ಇತ್ಯರ್ಥವಾದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

4. ವಿಷಯ: 94(ಸಿ) ಅರ್ಜಿಗಳನ್ನು ವಿಲೇ ಮಾಡುವ ಬಗ್ಗೆ.

*****

ಶ್ರೀ ಹೆಚ್. ಹಾಲಪ್ಪ (ಸೊರಬ):– ಮಾನ್ಯ ಅಧ್ಯಕ್ಷರೆ, 94(ಸಿ) ಬಗ್ಗೆ ಒಂದು ಕಳುಹಿಸಿದ್ದೇನೆ. ಇದರ ಬಗ್ಗೆ ಅವಧಿ ವಿಸ್ತರಿಸಬೇಕು ಮತ್ತು ಹೊಸದಾಗಿ ಅರ್ಜಿ ಹಾಕುವುದಕ್ಕೂ ಒಂದು ಅವಕಾಶ ಕೊಡಬೇಕು ಎಂದು ನಮ್ಮ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):– ಈ ಅರ್ಜಿಗಳನ್ನು ವಿಲೇಗೊಳಿಸುವುದು 31.01.2012 ಕೊನೆಯ ದಿನವಾಗಿದೆ. ಅದಕ್ಕೆ ಮಾನ್ಯ ಸದಸ್ಯರ ಅಹವಾಲಿದೆ. ಅದರ ಆಧಾರದ ಮೇಲೆ ಮೂರು ತಿಂಗಳುಗಳ ಕಾಲ ನಾವು ವಿಸ್ತರಿಸುತ್ತೇವೆ. ಅಂದರೆ 30.04.2012ರವರೆಗೆ ವಿಸ್ತರಿಸುತ್ತೇವೆ. ಹೊಸ ಅರ್ಜಿ ಹಾಕುವುದು ಒಂದು ಪಾಲಿಸಿ ವಿಷಯ. ನಾವು ಚರ್ಚೆ ಮಾಡಿ ಹೇಳುತ್ತೇವೆ. ವಿಲೇ ಮಾಡುವುದಕ್ಕೆ ನಾವು ಮೂರು ತಿಂಗಳುಗಳನ್ನು ವಿಸ್ತರಿಸುತ್ತೇವೆ. ಅದನ್ನು ನಾವು ಪರಿಶೀಲಿಸುತ್ತೇವೆ.

5. ವಿಷಯ: ಆಶ್ರಯ ಸಮಿತಿಗೆ ರಚನೆ ಮಾಡಿರುವ ಸಭೆಯನ್ನು ರದ್ದು ಮಾಡುವ ಬಗ್ಗೆ.

*****

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):– ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಈ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಗೆ ಒಂದು ಸಭೆ ರಚನೆ ಮಾಡಿದರು. ಅದನ್ನು ರದ್ದು ಮಾಡಿದ್ದೇವೆ, ರದ್ದು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಆದರೆ, ನಮ್ಮಲ್ಲಿ ನಿನ್ನೆ ಮೀಟಿಂಗ್ ಮಾಡಿದ್ದಾರೆ. ನಾವು ಆ A.C. ಯವರನ್ನು ಕೇಳಿದರೆ ಅವರು ನಮಗೆ ಯಾವುದೇ ಆದೇಶ ಬಂದಿಲ್ಲವೆಂದು ಹೇಳುತ್ತಾರೆ. ಮಾಡುವುದಾದರೆ ರಾಜ್ಯದಲ್ಲಿ ಎಲ್ಲಾ ಕಡೆ ಒಂದೇ ರೀತಿಯಲ್ಲಿ ಮಾಡಲಿ, ಅವರಿಗೆ ಅಧಿಕಾರ ಕೊಡುವುದಾದರೆ ಕೊಡಲಿ. ರದ್ದು ಮಾಡಿದ್ದೇವೆ